# ಮಾಹಿತಿ ಕೊರತೆ: ದಾಖಲಾಗದ ದೂರು

ಬೆಂಗಳೂರು: 'ಆಹಾರ ಮತ್ತು ನಾಗರಿಕ ಸರಬರಾಜು ವ್ಯವಸ್ಥೆಯಲ್ಲಿ ಗ್ರಾಹಕರ ಅನುಕೂಲಕ್ಕಾಗಿ ಜಾರಿ ಮಾಡಿರುವ ಶುಲ್ಕ ರಹಿತ ಸಹಾಯವಾಣಿ ಮತ್ತು ಜಾಗೃತ ಸಮಿತಿಯ ಬಗ್ಗೆ ಸಾರ್ವಜನಿಕರಲ್ಲಿ ಮಾಹಿತಿಯೇ ಇಲ್ಲ' ಎಂದು ಸಾರ್ವಜನಿಕ ವ್ಯವಹಾರಗಳ ಕೇಂದ್ರದ ಸದಸ್ಯ ಹರೀಶ್ ಪೂವಯ್ಯ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು. 'ಇತ್ತೀಚೆಗೆ ರಾಜ್ಯದ ವಿವಿಧ ಭಾಗದ 159 ಪಡಿತರ ವಿತರಣಾ ಅಂಗಡಿಗಳಲ್ಲಿ 'ಪಿಎಸಿ' ಕೈಗೊಂಡಿದ್ದ ಅಧ್ಯಯನದಲ್ಲಿ ಶೇ 7 ಮಂದಿಯಷ್ಟೇ ತಮಗೆ ಸಹಾಯವಾಣಿ ಮತ್ತು ಜಾಗೃತಿ ದಳಗಳ ಬಗ್ಗೆ ಅರಿವು ಇದೆ ಎಂದು ತಿಳಿಸಿದ್ದಾರೆ. ಅರಿವಿನ ಕೊರತೆಯಿಂದಾಗಿ ಅವ್ಯವಹಾರಗಳ ಬಗ್ಗೆ ಸಾರ್ವಜನಿಕರು ದೂರು ದಾಖಲಿಸುತ್ತಿಲ್ಲ' ಎಂದರು.

'ಜಾಗೃತಿ ದಳದ ಹಲವು ಸದಸ್ಯರಿಗೆ ತಾವು ಜಾಗೃತಿ ದಳದಲ್ಲಿದ್ದೇವೆ ಎಂಬುದರ ಮಾಹಿತಿಯೇ ಇಲ್ಲ. ಇದು ಅಪಾರದರ್ಶಕ ವ್ಯವಸ್ಥೆಗೆ ಹಿಡಿದ ಕನ್ನಡಿ' ಎಂದು ಆರೋಪಿಸಿದರು.

'ಅಧ್ಯಯನದ ಸಂದರ್ಭದಲ್ಲಿ ಮಾಹಿತಿ ನೀಡಿದ 30 ಆಹಾರ ನಿರೀಕ್ಷಕರಲ್ಲಿ 27 ಮಂದಿ ತಿಂಗಳಿಗೊಮ್ಮೆಯಾದರೂ ತಮ್ಮ ವ್ಯಾಪ್ತಿಯ ಎಲ್ಲಾ ಪಡಿತರ ವಿತರಣಾ ಅಂಗಡಿಗಳಿಗೆ ಭೇಟಿ ನೀಡುತ್ತೇವೆ ಎನ್ನುತ್ತಾರೆ.

ಪ್ರಶ್ನೋತ್ತರಗಳಿಗೆ ಉತ್ತರಿಸುವಾಗ ಅಂಗಡಿಗಳು ದೂರ, ರಸ್ತೆ ಸರಿಯಿಲ್ಲ, ಭೇಟಿ ನೀಡಲಾಗುವುದಿಲ್ಲ ಎಂದು ಬರೆದಿದ್ದಾರೆ' 'ಸಾರ್ವಜನಿಕ ಹಿತಾಸಕ್ತಿಯ ಉದ್ದೇಶದಿಂದ ಸಂಸ್ಥೆಯು ಈ ಅಧ್ಯಯನ ನಡೆಸಿದ್ದು ಹಲವು ಶಿಫಾರಸುಗಳನ್ನು ಒಳಗೊಂಡ ವಿಸ್ತೃತ ವರದಿಯನ್ನು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಮತ್ತು ಸಚಿವರಿಗೆ ನೀಡಿದ್ದೇವೆ' ಎಂದು ಹೇಳಿದರು.

+ ಪ್ರಜಾವಾಣಿ

ಬುಧವಾರ

26ನೇ ಮಾರ್ಚ್ 2014

2 B